<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಶ್ರೀ ಡಿ ಜೆ ಆರ್ ವಕೀಲರಿಂದಃ ಪ್ರತಿವಾದಿಯರ ಪರವಾಗಿಃ</u>

ಈ ಕೇಸಿನ ಪ್ರತಿವಾದಿ ಜಲ್ದೀರಪ್ಪ ನನಗೆ ಪರಿಚಯಸ್ಥರಿದ್ದು ಸದರಿಯವರು ಕುಂಚಟಿಗ ಜನಾಂಗದವರಿರುತ್ತಾರೆ. ನಾನು ಸಹ ಕುಂಚಟಿಗ ಜನಾಂಗದವನಾಗಿರುತ್ತೇನೆ. ಪ್ರತಿವಾದಿ ನನಗೆ ಸುಮಾರು ವರ್ಷದಿಂದ ಪರಿಚಯವಿರುತ್ತಾರೆ. ನನ್ನ ಮಗಳನ್ನು ಪ್ರತಿವಾದಿಯ ಊರಿಗೆ ಕೊಟ್ಟಿದ್ದರಿಂದ ಆತನ ಪರಿಚಯವಿರುತ್ತದೆ. ಜಲ್ದೀರಪ್ಪ ಇವರು ವ್ಯವಸಾಯ ಮಾಡಿಕೊಂಡು ಜೀವನ ಮಾಡುತ್ತಾರೆ ಎಂದರೆ ಸರಿ, ನನಗೂ ಹಾಗೂ ಜಲ್ದೀರಪ್ಪ ನಿಗೂ ಯಾವುದೇ ಭಿನ್ನಾಭಿಪ್ರಾಯ ವಾಗಿ ದ್ವೇಶ ಇರುವುದಿಲ್ಲ. ಅದೇ ರೀತಿ ನನ್ನ ಮಗಳಿಗೂ ಮತ್ತು ಪ್ರತಿವಾದಿಗೆ ಯಾವುದೇ ದ್ವೇಶ ಇರುವುದಿಲ್ಲ. ನನ್ನ ಅಳಿಯನ ಜಮೀನಿಗೆ ಹೊಂದಿಕೊಂಡಂತೆ ಪ್ರತಿವಾದಿಯ ಜಮೀನು ಇರುತ್ತದೆ ಅಂತ ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿರುತ್ತೇನೆ ಎಂದರೆಸರಿ. ನನ್ನ ಅಳಿಯನ ಜಮೀನಿನ ಸರ್ವೆ ನಂಬರ್ ಗೊತ್ತಿರುವುದಿಲ್ಲ. ಮತ್ತು ಅವರ ಜಮೀನು ಯಾವ ದಿಕ್ಕಿಗೆ ಪ್ರತಿವಾದಿಯ ಜಮೀನು ಇರುತ್ತದೆ ಅಂತ ಗೊತ್ತಿಲ್ಲ. ನನ್ನ ಅಳಿಯನಿಗೆ 15 ಎಕರೆ ಜಮೀನು ತೊರೆಬೀರನಹಳ್ಳಿ ಮತ್ತು ಬೆಳಗೆರೆ ಗ್ರಾಮದಲ್ಲಿ ಇರುತ್ತದೆ, ತೊರೆಬೀರನಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಬೆದ್ದಲು ಜಮೀನು ಇರುತ್ತದೆ. ನನ್ನ ಅಳಿಯನಿಗೆ ತೊರೆಬೀರನಹಳ್ಳಿ ಗ್ರಾಮದಲ್ಲಿ ಜಮೀನು ಇದ್ದು ಅದಕ್ಕೆ ಹೊಂದಿಕೊಂಡು ಪ್ರತಿವಾದಿಯ ಜಮೀನು ಇರುತ್ತದೆಯಾ ಎಂದರೆ ನನಗೆ ಗೊತ್ತಿಲ್ಲ. ತೊರೆಬೀರನಹಳ್ಳಿ ನನ್ನ ಅಳಿಯನಿಗೆ 15

ಗುಂಟೆ ಜಮೀನು ಇರುವುದನ್ನು ನಾನು ನೋಡಿರುವುದಿಲ್ಲ. ಅದೇ ರೀತಿ ತೊರೆಬೀರನಹಳ್ಳಿ ನನ್ನ ಅಳಿಯನಿಗೆ ಸಂಬಂದಿಸಿದ 2 ಎಕರೆ 13 ಗುಂಟೆ ಜಮೀನು ಇದೆ ಅಂತ ದಾವಾ ವಾದ ಪತ್ರದಲ್ಲಿ ಬರೆದಿರುತ್ತಾರೆ ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನನ್ನು ನಾನು ನೋಡಿಲ್ಲ ಅಂತ ಸಾಕ್ಷಿ ನುಡಿದಿರುತ್ತಾರೆ. ಅದೇ ರೀತಿ ಬೆಳೆಗೆರೆ ಗ್ರಾಮದಲ್ಲಿ 11 ಎಕರೆ 11 ಗುಂಟೆ ಜಮೀನು ನನ್ನ ಅಳಿಯನ ಹೆಸರಿಗೆ ಇರುವ ಜಮೀನನ್ನು ನಾನು ನೋಡಿರುವುದಿಲ್ಲ. ನನ್ನ ಅಳಿಯನಿಗೆ ಆರೋಗ್ಯದಲ್ಲಿ ಏರು ಪೇರಾಗಿ ಮೃತ ಪಟ್ಟಿರುತ್ತಾನೆ ಅಂತ ಬರೆಸಿದ್ದು ಈ ಕುರಿತು ಆತನಿಗೆ ಎಲ್ಲಿ ಚಿಕಿತ್ಸೆ ಕೊಡಿಸಿರುತ್ತೇನೆ ಎಂದು ಗೊತ್ತಿಲ್ಲ. ನನ್ನ ಅಳಿಯನನ್ನು ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ದರೊ ಇಲ್ಲವೊ ನನಗೆ ಗೊತ್ತಿಲ್ಲ. ನನ್ನ ಅಳಿಯ ವೇದಾವತಿ ನಗರದಲ್ಲಿ ಮೃತ ಪಟ್ಟಿರುತ್ತಾರೆ. ನನ್ನ ಅಳಿಯ ಮತ್ತು ಪ್ರತಿವಾದಿ ಮದ್ಯೆ ನಾನು ಹಿರಿಯೂರಿನಲ್ಲಿದ್ದಾಗ ವ್ಯವಹಾರ ಆಗಿರುತ್ತದೆ. ವ್ಯವಹಾರ ಆದಾಗ 4 ಜನರು ಇದ್ದರು, ನಾನು ನನ್ನ ಅಳಿಯ, ಮಗಳು ಮತ್ತು ಪ್ರತಿವಾದಿ ಜಲ್ದೀರಪ್ಪ ಇದ್ದೆವು. ಸದರಿ ವ್ಯವಹಾರ 2006 ರಲ್ಲಿ ಆಗಿದ್ದು, ದಿನಾಂಕ ತಿಂಗಳು ಗೊತ್ತಿಲ್ಲ. ಸದರಿ ವ್ಯವಹಾರ ಆಗುವಾಗಿ ಪ್ರತಿವಾದಿಯೇ ನನ್ನನ್ನು ಕರೆಸಿರುತ್ತಾರೆ. ವ್ಯವಹಾರ ಆದ ದಿವಸ ಯಾವುದೇ ಬರವಣಿಗೆ ಆಗಿರುವುದಿಲ್ಲ. ಹಣದ ಲೇವಾದೇವಿ ವ್ಯವಹಾರ ರೂ.4,68,000/- ಗೆ ಆಗಿದ್ದು ಸದರಿ ವ್ಯವಹಾರ ಆದ ಮೇಲೆ ಜಲ್ದೀರಪ್ಪರವರು ನನ್ನ ಅಳಿಯನಾದ ಜಯಣ್ಣನಿಗೆ ನಗದಾಗಿ ರೂ.68,000/- ಹಣ ಕೊಟ್ಟಿರುತ್ತಾರೆ. ನನ್ನ ಅಳಿಯ ಜೀವಂತ ಇರುವಾಗಲೆ ಜಲ್ದೀರಪ್ಪ ನಿಗೂ ನನ್ನ ಅಳಿಯನಿಗೂ ವ್ಯವಹಾರ ಆಗಿರುತ್ತದೆ ಅಂತ ಸುಳ್ಳು ಸಾಕ್ಷಿ

ಹೇಳುತ್ತಿದೇನೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿ ಜಲ್ದೀರಪ್ಪ ನನ್ನ ಸಮಕ್ಷಮ ನನ್ನ ಅಳಿಯನಾದ ಜಯಣ್ಣನಿಗೆ ಹಣ ಕೊಟ್ಟಿರುತ್ತಾರೆ ಅಂತ ಸುಳ್ಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ನನ್ನ ಅಳಿಯ ತೀರಿಕೊಂಡ ನಂತರ ನಾನು ಮತ್ತು ನನ್ನ ಮಗಳು ಜೀವನ ನಡೆಸಲು ಕಷ್ಟ ಆಗಿರುತ್ತದೆ ಎಂದರೆ ಸರಿ. ನನ್ನ ಅಳಿಯ ಮೃತನಾದ ನಂತರ ಆತನಿಗೆ ಸಂಬಂದ ಪಟ್ಟ ಜಮೀನಿಂದ ನನ್ನ ಮಗಳ ಕುಟುಂಬಕ್ಕೆ ವ್ಯಾಜ್ಯದ ಜಮೀನಿನಲ್ಲಿ ಆದಾಯ ಬರುತ್ತಿರಲಿಲ್ಲ ಅಂದರೆ ಸರಿಯಲ್ಲ. ನನ್ನ ಅಳಿಯ ಜೀವಂತ ಇದ್ದ ಕಾಲಕ್ಕೂ ಸದರಿ ಜಮೀನು ಬೀಳು ಬಿದ್ದ ಜಮೀನು ಆಗಿರುತ್ತದೆ ಅಂದರೆ ಸರಿಯಲ್ಲ. ನನ್ನ ಅಳಿಯ ಮೃತನಾದ ನಂತರ ಅವರ ಕುಟುಂಬದಲ್ಲಿ ವ್ಯವಸಾಯ ಮಾಡುವವರು ಯಾರು ಇರಲಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಅಳಿಯನ ಹೆಸರಿನಲ್ಲಿ ಇದ್ದ ಜಮೀನನ್ನು ಗುತ್ತಿಗೆ ಕೊಟ್ಟಿರುತ್ತೇನೆ ಅಂತ ಸಾಕ್ಷಿ ನುಡಿಯುತ್ತಾನೆ. ಅದೇ ರೀತಿ ನನ್ನ ಅಳಿಯ ತೀರಿಕೊಂಡ ನಂತರ ನನ್ನ ಮಗಳು ಕುಟುಂಬ ನಡೆಸುವುದು ಕಷ್ಟವಾಗಿದ್ದರಿಂದ ಮತ್ತು ಜಮೀನು ಸಾಗುವಳಿ ಮಾಡಲು ಆಗದೆ ಇರುವುದರಿಂದ ಆ ಕಾರಣಕ್ಕೆ ಜಮೀನನ್ನು ಮಾರಾಟ ಹಚ್ಚಿರುತ್ತೇವೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ನಾವು ವ್ಯಾಜ್ಯದ ಜಮೀನನ್ನು 4,00,000/- ರೂಗಳಿಗೆ ಪ್ರತಿವಾದಿಗೆ ಮಾರಾಟ ಮಾಡಲು ಒಪ್ಪಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯಿಂದ ನನ್ನ ಮಗಳು 4 ಲಕ್ಷ ರೂ ಹಣವನ್ನು ಪಡೆದುಕೊಂಡಿರುತ್ತಾಳೆ ಎಂದರೆ ಸರಿಯಲ್ಲ. 4 ಲಕ್ಷ ಹಣ ಕೊಟ್ಟ ದಿನವೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರ ಆದ ದಿನವೆ ಜೆರಾಕ್ಸ್‌ಕ್ರಯದ ಕರಾರು ಪತ್ರ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ

ಮಗಳು ನನ್ನ ಮೊಮ್ಮಕ್ಕಳು ಸೇರಿ ಪ್ರತಿವಾದಿಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿರುವುದನ್ನು ನಾನು ನೋಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನನಗೆ ಓದಲು ಬರುವುಲ್ಲ ಆ ಕಾರಣಕ್ಕೆ ನಾನು ನೋಡಿರುವುದಿಲ್ಲ. ನನ್ನ ಮಗಳು ಪ್ರತಿವಾದಿ ತನಗೆ ಕ್ರಯದ ಕರಾರು ಪತ್ರ ಬಂದು ಕೊಟ್ಟು ಹೋಗಿರುತ್ತಾನೆ ಅಂತ ತಿಳಿಸಿರುವುದಿಲ್ಲ. ಆದರೆ ಪ್ರತಿವಾದಿ ನನ್ನ ಮಗಳಿಗೆ ಹಣ ಕೊಟ್ಟು ಹೋಗಿರುವ ಬಗ್ಗೆ ಮಾತ್ರ ತಿಳಿಸಿರುತ್ತಾರೆ. ಪ್ರತಿವಾದಿ ನನ್ನ ಮಗಳಿಗೆ ಯಾವ ತಾರೀಖಿನಂದು ಹಣ ಕೊಟ್ಟು ಹೋಗಿರುತ್ತಾರೆ ಅಂತ ಗೊತ್ತಿಲ್ಲ. ನಾನು ಸಾಕ್ಷಿ ನುಡಿಯಲು ನಾಯಾಲಯಕ್ಕೆ ಬರುವ ಪೂರ್ವದಲ್ಲಿ ಕ್ರಯದ ಕರಾರು ಪತ್ರ ಬರೆದಿರುವುದನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನನ್ನ ಮಗಳಿಗೆ ನ್ಯಾಯಾಲಯದಿಂದಾಗಲಿ ವಕೀಲರಿಂದಾಗಲಿ ಹಾಗೂ ಇತರೆ ಕಛೇರಿಯಿಂದಾಗಲಿ ಯಾವುದೇ ನೋಟೀಸ್ ಅವಳಿಗೆ ಬಂದರೆ ಸದರಿ ವಿಷಯ ನನಗೆ ತಿಳಿಸುತ್ತಿರಲಿಲ್ಲ. ನಾವು ಜಮೀನಿನ ಸ್ವಾದೀನತೆ ಬಿಡಿಸಿಕೊಡಿ ಅಂತ ಪ್ರತಿವಾದಿ ಬಳಿ ಹೋಗಿ ಕೇಳಿರುತ್ತೇವೆ. ನಾವು 6-7 ವರ್ಷಗಳ ಹಿಂದೆ ಜಮೀನಿನ ಸ್ವಾಧೀನತೆ ಬಿಡಿಸಿ ಕೊಡಿ ಅಂತ ಕೇಳಲು ಪ್ರತಿವಾದಿ ಬಳಿ ಹೋಗಿರುತ್ತೇವೆ. ಸದರಿ ವಿಷಯ ಕೇಳಲು ಹೋದಾಗ ಗ್ರಾಮಸ್ಥರು ಯಾರು ಇರಲಿಲ್ಲ. ನಾನು ನನ್ನ ಮಗಳ ಸೇರಿ ಅವರ ಮನೆಯಲ್ಲಿಯೇ ಪ್ರತಿವಾದಿಗೆ ನಮ್ಮ ಜಮೀನು ಸ್ವಾಧೀನತೆಗೆ ಬಿಟ್ಟು ಕೊಡಿ ಅಂತ ಕೇಳಿರುತ್ತೇವೆ. ನಾನು ನನ್ನ ಮಗಳು ಪ್ರತಿವಾದಿಗೆ ಜಮೀನು ಸ್ವಾಧೀನತೆ ಬಿಟ್ಟುಕೊಡಿ ಅಂತ ಕೇಳಿ ಬಂದ ಮೇಲೆ ಪ್ರತಿವಾದಿಯು ಜಮೀನು ಸ್ವಾಧೀನತೆ ಬಿಟ್ಟು ಕೊಡದೆ

ಇದ್ದಾಗ ಆತನಿಗೆ ವಕೀಲರ ಮೂಲಕ ನೋಟೀಸ್ ಕೊಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿಯೇ ನಮಗೆ ನೋಟೀಸ್ ಕೊಟ್ಟಿರುತ್ತಾನೆ ಅಂತ ಸಾಕ್ಷಿ ನುಡಿದಿರುತ್ತಾನೇ. ಪ್ರತಿವಾದಿ ಸದರಿ ನೋಟೀಸ್ ನಲ್ಲಿ ಏನು ಬರೆಸಿರುತ್ತಾನೆ ಅಂತ ನನಗೆ ಗೊತ್ತಿಲ್ಲ. ಅದೇ ರೀತಿ ಜಲ್ದೀರಪ್ಪ ಇವರೆ ನೋಟೀಸ್ ಕೊಟ್ಟಿದ್ದು ಸದರಿ ನೋಟೀಸ್ ಗೆ ನಾನಾಗಲಿ ನನ್ನ ಮಗಳಾಗಲಿ ಉತ್ತರ ಕೊಟ್ಟಿರುವುದಿಲ್ಲ. ಪ್ರತಿವಾದಿ ನನ್ನ ಮಗಳಿಗೆ ಎರಡು ಬಾರಿ ನೋಟೀಸ್ ಕಳಿಸಿರುತ್ತಾನೆ. ಎರಡು ಬಾರಿ ಪ್ರತಿವಾದಿ ನನ್ನ ಮಗಳಿಗೆ ನೋಟೀಸ್ ಕೊಟ್ಟ ಮೇಲೆ ನಾವು ಉತ್ತರ ಕೊಟ್ಟಿರುವುದಿಲ್ಲ ಆದರೆ ನಾನು ನನ್ನ ಮಗಳು ಸೇರಿ ಖುದ್ದಾಗಿ ಪ್ರತಿವಾದಿಯನ್ನು ಬೇಟಿಯಾಗಿ ನನ್ನ ಜಮೀನು ನಮಗೆ ವಾಪಸ್ ಕೊಡಿ ಅಂತ ಕೇಳಿರುತ್ತೇವೆ. ಪ್ರತಿವಾದಿ ನನ್ನ ಮಗಳಿಗೆ ಎರಡು ಬಾರಿ ನೋಟೀಸ್ ಕೊಟ್ಟರು ಸಹ ನಾವು ಉತ್ತರ ಕೊಟ್ಟಿರುವುದಿಲ್ಲ ಅಂದರೆ ಸಾಕ್ಷಿಯು ನಾವು ಅನಕ್ಷರಸ್ತರಿದ್ದು ಓದು ಬರಹ ಬರದೆ ಇರುವುದರಿಂದ ಕೊಟ್ಟಿರುವುದಿಲ್ಲ ಅಂತ ಸಾಕ್ಷಿ ನುಡಿದಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಆರ್.ರಂಗಸ್ವಾಮಿ ಅಂತ ಬರೆದಿದ್ದು ಸದರಿ ಆರ್ ಅಕ್ಷರ ಇಂಗ್ಲೀಷ್ ನಲ್ಲಿ ಬರೆದಿದ್ದು ಇರುತ್ತದ ಅಂದರೆ ಸರಿ. ನನ್ನ ಮಗಳು ನಾಗರತ್ನಮ್ಮ ವಿದ್ಯಾಬ್ಯಾಸ ಮಾಡಿರುವುದಿಲ್ಲ 1 ಮತ್ತು 2 ನೇ ತರಗತಿಯವರೆಗೆ ಮಾತ್ರ ಓದಿರುತ್ತಾಳೆ. ನನ್ನ ಮೊಮ್ಮಕ್ಕಳಾದ ವಾದಿ 2 ರಿಂದ 4 ರವರು

ಇಬ್ಬರು ಸೀತಾರಾಮು ಮತ್ತು ಮನೋಹರ ಸ್ಟಾಪ್ ನರ್ಸ್ ಆಗಿರುತ್ತಾರೆ. 4 ನೇ ವಾದಿ ಸುಮ ಎಲ್ಲಿವರೆಗೆ ಓದಿರುತ್ತಾರೆ ಅಂತ ಜ್ಞಾಪಕವಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ , ನೀಡಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ ಚಳ್ಳಕೆರೆ.